LIBRARY

0245009

32168

Reg. No.

# I Semester B.A. Degree Examination, August - 2021

## ಐಚ್ಛಿಕ ಕನ್ನಡ

## ಐಚ್ಛಿಕ ಕನ್ನಡ ಪತ್ರಿಕೆ

## Paper : 01

## (CBCS Scheme Fresh)

**Time : 3 Hours** **Maximum Marks : 100**

I. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿ. (10×2=20)

1. ಸಾಹಿತ್ಯ ಪರಂಪರೆಯ ಮೇರುಕೃತಿಗಳು– ಅವುಗಳ ಮಹತ್ವ.
2. ನಾಗರೀಕರು ಯಾರು? ಅವರ ಲಕ್ಷಣ.
3. ಸಂಸ್ಕೃತದಲ್ಲಿರುವ ನಾಟಕ ಪದದ ಅರ್ಥ
4. ಜಿ.ಎಸ್.ಎಸ್. ರವರು ಹೇಳುವ "ಗತಿ" ಮತ್ತು "ಬಿಂಬ".
5. ಸೌಂದರ್ಯಾನುಭವ ಹಾಗೂ ಕಾವ್ಯಾನುಭವಗಳ ಸಂಬಂಧ.
6. ಕಲೆ ಸೌಂದರ್ಯವನ್ನು ಸೃಜಿಸುವ ಚಟುವಟಿಕೆ ಹೇಗೆ?
7. ಪುಟ್ಟರಂಗಿಯ ತಾಯಿ "ಗೊಂಬೆಯನ್ನು ಹಿಂತಿರುಗಿ ಕೊಟ್ಟು ಬಾ" ಎಂದು ಹೇಳಲು ಕಾರಣವೇನು?
8. ಕವಿ ಕುವೆಂಪು ಚಿತ್ರಿಸುವ "ಸುಂದರ ಪ್ರಾತಃ ಕಾಲದ" ಚಿರ ಸೌಂದರ್ಯ.
9. ಸಾಹಿತ್ಯದಲ್ಲಿ ಕಾಣುವ "ಸಾಮಾಜಿಕ ಪ್ರಜ್ಞೆ".
10. ಪ್ರೊ॥ ಎಂ. ಮರಿಸ್ವಾಮಿಯವರೊಡನೆ ಸಂದರ್ಶನ
11. ಕ್ರಾಲಿಕ್ ತಿಳಿಸುವ ಪಂಚದಳ ವಿನ್ಯಾಸ.
12. "ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ"–ಈ ವಚನದ ತಾತ್ತ್ವಿಕತೆ.
13. ಮಾಯಕಾರನ ಮಹತ್ವ
14. ಸಂಯುಕ್ತಾ ತನ್ನ ಅಮ್ಮನನ್ನು ನೆನಪು ಮಾಡಿಕೊಳ್ಳುವ ಬಗೆ.
15. ಸಾರಾ ಅಬೂಬಕರ್ ಚಿತ್ರಿಸುವ ಕೇರಳ ಮುಸ್ಲಿಂರ ಬದುಕು.
16. ಯಶವಂತ ಚಿತ್ತಾಲರ ಕತೆಯ "ಕೇಂದ್ರ ವಸ್ತು".

BMSCW LIBRARY

[P.T.O.

LIBRARY



**II.** ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ. **(4×5=20)**

1. ಶಾಸ್ತ್ರ ಗ್ರಂಥಗಳನ್ನು ಕುರಿತು ಎ.ಎನ್. ಮೂರ್ತಿರಾವ್‌ರವರ ಅಭಿಪ್ರಾಯ.
2. ನಾಟಕದ ಸ್ವರೂಪ ಮತ್ತು ವ್ಯಾಪ್ತಿಯನ್ನು ಸಂಗ್ರಹಿಸಿ ಬರೆಯಿರಿ.
3. "ಬಡತನವು ಸಾಹಿತ್ಯ ವಸ್ತುವೇಕಾಗಿದೆ" ಎಂದು ದ.ರಾ. ಬೇಂದ್ರೆಯವರು ಹೇಳಲು ಕಾರಣವಾದ ಅಂಶಗಳನ್ನು ಬರೆಯಿರಿ.
4. "ಸಾಹಿತ್ಯ ಬಿಂಬವೇನೋ ಹೌದು, ಆದರೆ ಪ್ರತಿ ಬಿಂಬ" ವಲ್ಲ ಎಂದು ಜಿ.ಎಸ್..ಶಿವರುದ್ರಪ್ಪನವರು ವ್ಯಕ್ತಪಡಿಸಿರುವ ಬಗೆ.
5. ಪಂಚ ಪ್ರಜ್ಞೆಗಳಾವುವು? ಅವುಗಳ ಕಲಾತ್ಮಕ ನಿರ್ವಹಣೆಯನ್ನು ಕುರಿತು ಬರೆಯಿರಿ.
6. ವನಜಾಕ್ಷಿ ಹಾಗೂ ಪುಟ್ಟರಂಗಿಯ ಸ್ನೇಹದಲ್ಲಿನ ಮುಗ್ಧತೆಯನ್ನು ತಿಳಿಸಿ.

**III.** ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಇಪ್ಪತ್ತೈದು ವಾಕ್ಯಗಳಲ್ಲಿ ಉತ್ತರಿಸಿ. **(4×10=40)**

1. "ಇಂತಹ ಸುಂದರ ಪ್ರಾತಃಕಾಲದಿ" ಪದ್ಯದಲ್ಲಿ ಕವಿ "ಇರುವಾಸೆಯ ತೊಡು" ಎಂದು ಹೇಳಲು ಕಾರಣ ಮತ್ತು ಪರಿಣಾಮವನ್ನು ವಿವರಿಸಿ.
2. "ಭಾರತ ಗಾಯಗೊಂಡಿದೆ" ಈ ಗಾಯಕ್ಕೆ "ಚಿಕಿತ್ಸೆ" ಯಾವುದೆಂದು ದೇವನೂರರು ತಿಳಿಸುತ್ತಾರೆ, ಚರ್ಚಿಸಿ.
3. "ಗೋವು ತಿಂದು ಗೋವಿನಂತಾದೆವು" ಈ ಪದ್ಯದ ಆಶಯವೇನು?
4. ಜುಂಜಪ್ಪನ ಗಣೆ ಪದಗಳ ಸ್ವಾರಸ್ಯವನ್ನು ಕುರಿತು ಬರೆಯಿರಿ.
5. ನೀರು ತಂದವರು ಯಾರು? ಎಲ್ಲಿ? ಹೇಗೆ? ವಿವರಿಸಿ.
6. "ಬದುಕಲ್ಲಿ ಯಾವುದೂ ಪುಕ್ಕಟೆ ದೊರೆಯುವುದಿಲ್ಲ" ಎನ್ನುವ ಸಂಯುಕ್ತಾಳ ಮಾತಿನ ಹಿನ್ನೆಲೆಯೇನು? ಉದಾಹರಣೆಯೊಂದಿಗೆ ಸಮರ್ಥಿಸಿ.

BMSCW LIBRARY

**IV.** ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ (ಓದು ಪಠ್ಯ). **(2×5=10)**

1. ಬಸವರಾಜ ಕಟ್ಟಿಮನಿ ಚಿತ್ರಿಸುವ "ಗಿರಿಜಾ ಕಂಡ ಸಿನಿಮಾ".
2. ನಿಮ್ಮ ಮೇಲೆ ಪ್ರಭಾವ ಬೀರಿದ ಜನಪದ ಕತೆ.
3. ಕುವೆಂಪುರವರ "ನಾಗಿ" ಕಥನಕವನದಲ್ಲಿ ಶೋಕ ಮಡುಗಟ್ಟಿದ ಬಗೆ.
4. "ಒಂದು ಚಡ್ಡಿಯ ಕತೆ" ಯ ಸ್ವಾರಸ್ಯ.

**V.** ಯಾವುದಾದರೂ **ಒಂದು** ವಿಷಯಕ್ಕೆ ಇಪ್ಪತ್ತೈದು ವಾಕ್ಯಗಳಲ್ಲಿ ಪ್ರಬಂಧ ರಚಿಸಿ. **(1×10=10)**

1. ಕನ್ನಡ ಸಂಸ್ಕೃತಿ.
2. ಸಮೂಹ ಮಾಧ್ಯಮ.
3. ಕನ್ನಡ ರಂಗಭೂಮಿ.